ಪದ್ಧತಿಮೇಲೆ ನೇಮಕ ಮಾಡಿಕೊಳ್ಳುವಾಗ ಅವರ ಸಂಬಳವನ್ನು ಒಂದು ಸಾವಿರ ರೂಪಾಯಿ ಗಳಾದರೂ ಏರಿಸಿದರೆ ಅದರಿಂದ ಸ್ವಲ್ಪ ಪ್ರಯೋಜನವಾಗುತ್ತದೆ. ಇದನ್ನು ಪರಿಶೀಲಿಸುತ್ತೀರಾ ?

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು ಹೇಳಿರುವ ಸಲಹೆಯನ್ನು ನಾನು ಪರಿಶೀಲನೆ ಮಾಡುತ್ತೇನೆ.

ಬೆಂಗಳೂರು ನಗರದಲ್ಲಿ ಬಹುಮಹಡಿ ಕಟ್ಟಡಗಳನ್ನು ಕಟ್ಟುವುದಕ್ಕೆ ಪರವಾನಿಗೆ

೨೫೯ (೨೮) ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ನಗರಾಭಿವೃದ್ಧಿ ಸಚಿವರು ದಯವಿಟ್ಟು ಉತ್ತರಿಸುವರೆ :—

ಅ) ಸರ್ಕಾರದ ಅನುಮತಿಯಂತೆ ಬೆಂಗಳೂರು ನಗರದಲ್ಲಿ ಈಗಾಗಲೇ ಬಹುಮಹಡಿ ಕಟ್ಟಡ ಗಳನ್ನು ಕಟ್ಟಿರುವುದರ ಬಗ್ಗೆ ಸರ್ಕಾರದ ನೀತಿ ಏನು ? ಅದರಂತೆ ಸ್ವಾಧೀನಕ್ಕೆ ಒಪ್ಪಿಸಲು ಅನುಮತಿ ಪತ್ರ ನೀಡುವುದರಲ್ಲಿ ಅನುಚಿತ ವಿಳಂಬವಾಗಿರುವುದು ನಿಜವೇ ?

ಆ) ಈ ರೀತಿ ಕಟ್ಟಿಮುಗಿಸಿರುವ ಕಟ್ಟಡಗಳ ಸಂಖ್ಯೆ ಮತ್ತು ಅದರಲ್ಲಿ ಉಪಯೋಗಕ್ಕಾಗಿ ಅನುಮತಿ ನೀಡಿರುವ ಕಟ್ಟಡಗಳ ಸಂಖ್ಯೆ ಮತ್ತು ಕಾನೂನನ್ನು ಉಲ್ಲಂಘಿಸಿರುವ ಜನಗಳ ಸಂಖ್ಯೆ ಎಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ನಗರಾಭಿವೃದ್ಧಿ ಸಚಿವರು).—

ಅ) ಬೆಂಗಳೂರು ನಗರದಲ್ಲಿ ಬಹುಮಹಡಿ ಕಟ್ಟಡಗಳನ್ನು ಕಟ್ಟಲು ಸರ್ಕಾರ ಪರವಾನಿಗೆ ನೀಡಿಲ್ಲ. ಅಂಥಹ ಪರವಾನಿಗೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಅಥವಾ ಅವರಿಂದ ಆದೇಶಿತರಾದವರು ಕೊಟ್ಟಿರುತ್ತಾರೆ. ಕೆಲವು ಬಹುಮಹಡಿ ಕಟ್ಟಡಗಳನ್ನು ಆಕ್ರಮಿಸಲು ಪರವಾನಿಗೆ ನೀಡುವುದರಲ್ಲಿ ವಿಳಂಬವಾಗಿರುವುದು ನಿಜ.

ಆ) ೨೭–೬–೧೯೮೪ಕ್ಕೆ ಮುಂಚೆ ೫೯ ಪ್ರಸಂಗಗಳಲ್ಲಿ ಷರತ್ತಿಗೊಳಪಟ್ಟ ಆಕ್ರಮಿಸುವ ದೃಢೀಕರಣ ಪತ್ರಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ನೀಡಿರುತ್ತಾರೆ.

ಕಟ್ಟಡಗಳು ಕಟ್ಟಿರುವುದು ಜೋನಲ್ ರೆಗ್ಯುಲೇಷನ್ಸ್ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ ಬಿಲ್ಡಿಂಗ್ ಬೈಲಾಗಳಲ್ಲಿನ ವ್ಯವಸ್ಥೆ (ಪ್ರೊವಿಷನ್ಸ್) ಗಳ ವಿರುದ್ಧವಾಗಿರುವುದರಿಂದ ೧೯ ಪ್ರಸಂಗಗಳಲ್ಲಿ ಆಕ್ರಮಿಸುವ ದೃಢೀಕರಣ ಪತ್ರಗಳ ನೀಡಿಕೆಯನ್ನು ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ನಿರಾಕರಿಸಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಬೆಂಗಳೂರು ನಗರಸಭೆ ಕಮಿಷನರ್‌ರವರು ಪರವಾನಗಿಯನ್ನು ಕೊಡಬೇಕಾದರೆ ಸರ್ಕಾರದ ಟೌನ್ ಡೆವಲಪ್‌ಮೆಂಟ್ ಬೋರ್ಡ್ ಅಂತ ಏನು ಇದೆ. ಅವರೂ ಕೂಡ ಅಲ್ಲಿ ಇರುತ್ತಾರೆ. ಇದು ಮಾನ್ಯಮಂತ್ರಿಗಳ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಲಕ್ಷ್ಮೀಸಾಗರ್.—ಬಂದಿದೆ.

ಶ್ರೀ ಕೆ. ಎಚ್. ಪಾಟೀಲ್.—ಎರಡನೆಯದು, ಪರವಾನಗಿ ಕೊಡುವುದರಲ್ಲಿ ವಿಳಂಬ ಆಗಿದೆ, ೧೯ ಪ್ರಸಂಗಗಳಲ್ಲಿ ದೃಢೀಕರಣ ಪತ್ರಗಳನ್ನು ಕೊಡಲು ನಿರಾಕರಿಸಿದ್ದಾರೆ ಎಂದು ಹೇಳಿದರು. ಇವರೆಲ್ಲರೂ ಸಾರ್ವಜನಿಕರಿಂದ ಹಣ ಪಡೆದು ಇದಕ್ಕೆ ಹೂಡಿರುತ್ತಾರೆ. ಇದರಲ್ಲಿ ಅಂಡರ್ ಹ್ಯಾಂಡ್ ಡೀಲಿಂಗ್ ಬಹಳ ನಡೆಯುತ್ತದೆ. ಸರ್ಕಾರದವರು ಹಣ ತೆಗೆದುಕೊಂಡಿದ್ದಾರೆ ಎಂದು ನಾನು ಹೇಳುವುದಿಲ್ಲ. ನಿಮ್ಮ ಹೆಸರು ಹೇಳಿ ಹಣ ದೋಚುವವರು ಇರುತ್ತಾರೆ. ಸಾರ್ವಜನಿಕರಿಂದ ಹಣ ತೆಗೆದುಕೊಂಡು ಕಟ್ಟಡಗಳನ್ನು ಕಟ್ಟಿರುವುದರಿಂದ, ಇಂತಿಂಥಾದ್ದಕ್ಕೆ ಅನುಮತಿ ಕೊಟ್ಟಿಲ್ಲವೆಂದು ಸ್ಪಷ್ಟೀಕರಣ ಕೊಟ್ಟರೆ ಒಳ್ಳೆಯದು. ಇನ್ನು ಮುಂದೆ ಜನರು ಅಲ್ಲಿ ಹಣ ಹೂಡಲಿಕ್ಕೆ ಹೋಗುವುದಿಲ್ಲ ಬಿಲ್ಡಿಂಗ್ ಮಾಲೀಕರು ಕೋಟಿಗಟ್ಟಲೆ ಹಣ ಕೊಡುವವರಿಂದ ವಸೂಲಿ ಮಾಡುತ್ತಿದ್ದಾರೆ. ಆದ್ದರಿಂದ ಯಾರ್ಯಾರಿಗೆ ಮಂಜೂರು ಮಾಡಿದ್ದೀರಿ, ಯಾರಿಗೆ ಪರವಾನಗಿ ಮಂಜೂರು ಮಾಡಿಲ್ಲ ವೆಂದು ಹೇಳುವುದು ಒಳ್ಳೆಯದೆಂದು ಭಾವಿಸುತ್ತೇನೆ. ಇದನ್ನು ತಿಳಿಸುವಿರಾ ?

ಶ್ರೀ ಎ. ಲಕ್ಷ್ಮೀಸಾಗರ್.—೫೯ ಕೇಸ್‌ಗಳಲ್ಲಿ ದೃಢೀಕರಣ ಪತ್ರಗಳನ್ನು ಕೊಡಲಾಗಿದೆ ಎಂದು ಹೇಳಿದ್ದೇನೆ. ಇನ್ನು ೧೯ರಲ್ಲಿ ನಿರಾಕರಿಸಿದ್ದಾರೆ. ಕಾರಣಗಳನ್ನು ಹೇಳಿದ್ದೇನೆ. ಇದರ ಬಗ್ಗೆ ಸಂಶಯಕ್ಕೆ ಕಾರಣ ಇಲ್ಲ. ಕಾರಣ ಇಷ್ಟೇ, ಹೈಕೋರ್ಟಿನಲ್ಲಿ ಇದರ ಬಗ್ಗೆ ರಿಟ್‌ಪಿಟಿಶನ್ ಹಾಕಿದ್ದರು. ಕಂಡೀಷನಲ್ ಸರ್ಟಿಫಿಕೇಟನ್ನು ಇಸ್ಯೂ ಮಾಡಿದ್ದೇವೆ, ಒಟ್ಟು ೧೯ ಆಕ್ಯುಪೇಷನ್ ಸರ್ಟಿಫಿಕೇಟುಗಳನ್ನು ರಿಜೆಕ್ಟ್ ಮಾಡಿದ್ದೇವೆ. ಇದರ ಬಗ್ಗೆ ಸಂಶಯಕ್ಕೆ ಕಾರಣವಿಲ್ಲ. ಇದರ ಪಕ್ಕದ ಮನೆಯವರು ಹೈಕೋರ್ಟಿಗೆ ಹೋಗಿದ್ದಾರೆ. ಜೂನ್ ೮೨ರಲ್ಲಿ ಹೈಕೋರ್ಟಿನವರು ತೀರ್ಮಾನವನ್ನು ಕೊಟ್ಟರು. ಇದರ ವಿರುದ್ಧವಾಗಿ ಮೂರು ಜನ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಿದ್ದಾರೆ ಅಪೀಲು ಸುಪ್ರೀಂ ಕೋರ್ಟಿನಲ್ಲಿದೆ. ಈ ಮಧ್ಯೆ ಕೆಲವರು ನಮಗೆ ತೊಂದರೆಯಾಗಿದೆ. ಮುಂಗಡವಾಗಿ ಹಣವನ್ನು ಕೊಟ್ಟಿದ್ದೇವೆ. ಆದುದರಿಂದ ನಮಗೆ ಸಹಾಯ ಮಾಡಿ ಎಂದು ಕೇಳಿದರು ಸರ್ಕಾರದವರು ಯಾವ ಒಂದು ಆಳತೆಗೋಲನ್ನು ಇಟ್ಟುಕೊಳ್ಳಬೇಕು. ೪–೫–೬ ಅಥವಾ ೧೩ ಗ್ರೌಂಡ್ ಫ್ಲೋರ್‌ನಿಂದ ಇದೆ. ಇದರ ಬಗ್ಗೆ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದು ಸರ್ಕಾರದ ಕೈಯ್ಯಲ್ಲಿ ಆಗಿಲ್ಲ. ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕಾರ ನಾವು ತೀರ್ಮಾನ ಮಾಡುತ್ತೇವೆ. ಆದು ಬೇಗ ತೀರ್ಮಾನವಾಗಬಹುದೆಂದು ನಾನು ನಿರೀಕ್ಷಿಸುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣ್ ಸಿಂಗ್.—ಬಹಳ ಮಹತ್ವವಾದ ಪ್ರಶ್ನೆಯನ್ನು ಮಾನ್ಯ ಕೆ. ಹೆಚ್. ಪಾಟೀಲ್ ರವರು ಕೇಳಿದ್ದಾರೆ. ೧೯೮೨ರಲ್ಲಿ ಮೊದಲನೇ ಸಾರಿ ಗ್ರೌಂಡ್ ಪ್ಲಸ್ ೩ ಇಲ್ಲವೇ ೪ ಫ್ಲೋರ್ ಎಂದು ಸರ್ಕಾರ ನಿರ್ಣಯ ತೆಗೆದುಕೊಂಡಿತ್ತು. ಆದರ ಬಗ್ಗೆ ಸಾಕಷ್ಟು ಜನರು ಕೋರ್ಟಿಗೆ ಹೋದರು ಈಗ ಬಿಲ್ಡಿಂಗ್ ಬೈಲಾಸ್ ಅನ್ನು ಮಾಡುತ್ತಿದ್ದೀರಿ. ಮಾನ್ಯ ಲಕ್ಷ್ಮೀಸಾಗರ್‌ರವರು ಬೆಂಗಳೂರಿನಲ್ಲಿರತಕ್ಕಂತವರು. ಇವರು ಮಂತ್ರಿಗಳಾಗಿದ್ದಾರೆ. ಜೋನಲ್‌ನಲ್ಲಿ ಎಷ್ಟೋ ಚೇಂಜಸ್ ಆಗಿದೆ. ೧೯೪೦ರಲ್ಲಿ ಬೆಂಗಳೂರಿನ ಪಾಪುಲೇಷನ್ ೩ ಲಕ್ಷ ಇತ್ತು. ಈಗ ೪೦ ಲಕ್ಷ ಆಗಿದೆ. ಹೈರೈಸ್ಡ್ ಬಿಲ್ಡಿಂಗ್ ಬಗ್ಗೆ ಬೈಲಾಸ್ ಅನ್ನು ಫೈನಲೈಸ್ ಮಾಡಿದ್ದೀರಾ ? ಹಾಗೂ ಹೈರೈಸ್‌ಗೆ ಪರ್ಮಿಷನ್ ಕೊಡಬೇಕಾದರೆ, ಸರ್ಕಾರ ಯಾವ ರೀತಿಯ ಗಮನವನ್ನು ಕೊಡುತ್ತಿಲ್ಲ. ಇದರ ಬಗ್ಗೆ ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾಗಿ ವಿನಂತಿ, ಇದು ಬಹಳ ಮುಖ್ಯವಾದ ವಿಷಯ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಷಯ ಕೋರ್ಟಿನಲ್ಲಿರುವುದರಿಂದ ನಾವು ಯಾವ ವಿಧವಾದಂಥಹ ತೀರ್ಮಾನಕ್ಕೆ ಬರುವುದು ಕಷ್ಟವಾಗಿದೆ. ಮುತ್ತು ಎರಡನೆಯದಾಗಿ, ನಾವು ಅಪಾದನೆಗೆ ಗುರಿಯಾಗುತ್ತೇವೆ. ನಾಲ್ಕು ಪ್ಲಸ್ ಗ್ರೌಂಡ್, ಆರು ಪ್ಲಸ್ ಗ್ರೌಂಡ್ ಕೊಟ್ಟರೂ ಕೂಡಾ ಅಪಾದನೆಗೆ ಗುರಿಯಾಗುತ್ತೇವೆ. ಇದರಲ್ಲಿ ನ್ಯಾಯವಿರಬಹುದು. ಇದರಿಂದಾಗಿ ಬಹತೇಕ ಜನರಿಗೆ ಅನುಕೂಲವಾಗುತ್ತದೆ. ಆದರೆ, ಇದರಿಂದಾಗಿ ನಾವು ಅಪಾದನೆಗೆ ಗುರಿಯಾಗತಕ್ಕಂತಹ ಸನ್ನಿವೇಶ ವಿದೆ. ಸುಪ್ರೀಂ ಕೋರ್ಟಿನವರ ತೀರ್ಮಾನದಂತೆ ನಾವು ನಡೆದುಕೊಳ್ಳತಕ್ಕಂತಹ ಕರ್ತವ್ಯ ನಮ್ಮದಾಗಿದೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—೧೯೮೨ರಲ್ಲಿ ಮುಂದೆ ಕೊಡಬಾರದೆಂದು ನಿರ್ಣಯ ಮಾಡಲಾಗಿದೆ. ಆದರೆ, ಕೆಲವೇ ಇಂಡುವಿಜ್ಯುಯಲ್ ಕೇಸ್‌ಗಳು ಸುಪ್ರೀಂ ಕೋರ್ಟಿಗೆ ಹೋಗಿವೆ. ಬೊಂಬಾಯಿ ಕಲ್ಕತ್ತಾದಿಂದ ಬರತಕ್ಕಂತಹ ಜನರು ದುಡ್ಡು ಖರ್ಚುಮಾಡಿ ಬಿಲ್ಡಿಂಗ್ ಕಟ್ಟಿಸುವುದಕ್ಕೆ ಹೋಗುತ್ತಾರೆ. ಆದುದರಿಂದ ಈ ಹೈ ರೈಸ್ ಬಿಲ್ಡಿಂಗ್ ಬಗ್ಗೆ ಕಾರ್ಪೊರೇಷನ್ನಿನವರ ನಿಲುವು ಏನು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಸುಪ್ರೀಂ ಕೋರ್ಟಿಗೆ ಒಬ್ಬಿಬ್ಬರು ಹೋಗಿರಬಹುದು. ಆದರೆ ಇಲ್ಲಿ ಅಡಕವಾಗಿರತಕ್ಕಂತಹ ಪ್ರಶ್ನೆ ಎಂದರೆ, ನಾವು ಯಾವ ರೀತಿ ಕೊಟ್ಟರೂ ಅಪಾದನೆಗೆ ಗುರಿಯಾಗುತ್ತೇವೆ. ಅದನ್ನು ಗಮನಿಸಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಕೋರ್ಟಿನಲ್ಲಿ ಖಾಲಿಯಾಗಲು ಪರ್ಚಗಟ್ಟಲೆ ಹಿಡಿಯುತ್ತದೆ. ಇದು ಮಾನ್ಯ ಲಕ್ಷ್ಮೀಸಾಗರ್‌ರವರಿಗೂ ಗೊತ್ತಿದೆ. ಅವರು ಲಕ್ಷಗಟ್ಟಲೆ ಅದರಲ್ಲಿ ಹಣವನ್ನು ಇನ್ ವೆಸ್ಟ್ ಮಾಡಿರುತ್ತಾರೆ. ಅವರಿಗೆ ಪರವಾನಗಿ ಕೊಡದೇ ಹೋದರೆ, ಬಹಳ ಕಷ್ಟವಾಗುತ್ತದೆ. ಪರವಾನಗಿ ಕೊಡಲು ಒಂದು ಕೋಟಿ ರೂಪಾಯಿ ಕೊಡಬೇಕೆಂದು ಹೇಳುತ್ತಾರೆ. ಆದುದರಿಂದ these are rejected cases. ಎಂದು ಪ್ರುಸೆಂಟ್ ಮಾಡಿ, ಒಂದು ಕಡೆ ನಾಲ್ಕು ಅಂತಸ್ತು ಇನ್ನೊಂದು ಕಡೆ. ಹೆಚ್ಚಿಗೆ ಕೊಟ್ಟಿದ್ದೀರಿ. ಆ ೧೯ ಪ್ರಸಂಗಗಳಲ್ಲಿ ಎಷ್ಟು ನಿಕಾಲೆ ಮಾಡಿದ್ದೀರಿ

ಎಂಬುದನ್ನು ತಿಳಿಸಿ, ನಾಲ್ಕು ಫ್ಲೋರ್‌ಗೆ ಪಾತ್ರವೆಂದು ಪರ್ಮಿಷನ್ ಕೊಟ್ಟಿದ್ದೀವೆಂದು ಹೇಳುತ್ತೀರಿ ಉಳಿದಿದಕ್ಕೆ subject to the dicission of the Court ಎಂದು ಬೇಕಾದರೆ ಹೇಳಿ. ಮೂರು ಕೇಸುಗಳು ಕೋರ್ಟಿಗೆ ಹೋಗಿದೆಯೆಂದು, ನೀವು ಯಾವ ಕ್ರಮವನ್ನೂ ತೆಗೆದುಕೊಳ್ಳದೇ ಹೋದರೆ ಹೇಗೆ ?

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರದ ಮೇಲೆ ಆಪಾದನೆ ಮಾಡುವುದಕ್ಕೆ ಯಾವ ಕಾರಣವೂ ಇಲ್ಲ. ಆದ್ದರಿಂದ ಈ ಪ್ರಶ್ನೆ ಇದರಲ್ಲಿ ಉದ್ಭವವಾಗುವುದಿಲ್ಲ.

The question is, whether the licence is issued to the high rise builders in accordance with the Corporation Act and the byelaws framed thereunder The entire case is before the Supreme Court. The final decision will be rendered by the Supreme Court. They have waited for so long and it is better in the intrest of all concerned including the Government to await the pacision of the supreme Court.

SRI K.H. PATIL.—If they have voilated, what is the reason for keeping them pending ? why are you waiting for the decision? Let the decision be there. If they have violated the bye-laws, you immediately reject them and declare that these are the rejected cases so that the public may not be cheated.

SRI A. LAKSHMI SAGAR.—No Sir, I am not in agreement with the Hon'ble Member.

ಗೋಕಾಕ್ ಫಾಲ್ಸ್ ಅಧಿಸೂಚಿತ ಪ್ರದೇಶ ಸಮಿತಿಯ ಕಾರ್ಯಗಳ ಬಗ್ಗೆ

೬೭೯ (ಡಿ) ಶ್ರೀ ಎಂ.ಎಲ್.ಮುತ್ತಣ್ಣನವರ್ (ಗೋಕಾಕ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಸಚಿವರು ದಯವಿಟ್ಟು ಉತ್ತರಿಸುವರೇ :—

ಅ) ಗೋಕಾಕ್ ನಗರದಲ್ಲಿರುವ ನೋಟಿಫೈಡ್ ಏರಿಯ ಸಮಿತಿಯು ಸರಿಯಾಗಿ ಕೆಲಸ ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲು ಉದ್ದೇಶಿಸುವ ಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ನಗರಾಭಿವೃದ್ಧಿ ಸಚಿವರು).—

ಅ) ಈ ಬಗ್ಗೆ ದೂರು ಬಂದಿದೆ.

ಆ) ದೀಪ, ನೀರು ಮತ್ತು ಇತರ ಸೌಲಭ್ಯಗಳನ್ನು ಒದಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸೂಚನೆಯನ್ನು ನೀಡಲಾಗಿದೆ.

ಶ್ರೀ ಎಂ.ಎಲ್. ಮುತ್ತಣ್ಣನವರ್.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಗೋಕಾಕ್ ನಗರದಲ್ಲಿರುವ ನೋಟಿಫೈಡ್ ಏರಿಯಾ ಸಮಿತಿಯ ಬಗ್ಗೆ ದೂರು ಬಂದಿದೆಯೆಂದು ಹೇಳಿದರು. ೧೯೪೪-೪೫ರಲ್ಲಿ ನಾವು ಕರಣವಾದರೂ ಏತಕ್ಕೆ ಸರಿಯಾಗಿ ಕೆಲಸ ಮಾಡುವುದಕ್ಕೆ ಆಗಿಲ್ಲ. ಇಲ್ಲಿ ಕಾರ್ಮಿಕ ವರ್ಗದವರು ಬಹಳ ಜನ ಇರುತ್ತಾರೆ. ಅವರಿಗೆ ದೀಪದ ವ್ಯವಸ್ಥೆ, ನೀರಿನ ವ್ಯವಸ್ಥೆ ಮಾಡಿಕೊಡಬೇಕು. ಸುಮಾರು ೩ಳಿ ವರ್ಷದಿಂದ ಅಲ್ಲಿ ಈ ವ್ಯವಸ್ಥೆ ಇಲ್ಲ. ಈಗಲೇ ಅದನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ. ೨೬೩(೮೦೪) ಶ್ರೀ ಬಿ. ಆರ್. ನೀಲಕಂಠಪ್ಪ.—(ಮಾನ್ಯ ಸದಸ್ಯರು ಹಾಜರಿರಲಿಲ್ಲ.)